ಓ ಎಸ್ ನಂ. 89/2018

- - ಓ ಎಸ್ ನಂ. 89/2018

ಡಿ .ಡಬ್ಲ್ಯೂ :1

ದಿನಾಂಕ :17-12-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನಾನು ಐದನೇ ತರಗತಿ ವ್ಯಾಸಂಗ ಮಾಡಿದ್ದೇನೆ . ವಾದಿಯು ಈ ದಾವೆಯಲ್ಲಿ ಏನು ಪರಿಹಾರ ಕೋರಿದ್ದಾರೆ ಎಂದು ಗೊತ್ತಿಲ್ಲ . ವಾದಿ ಮತ್ತು 1,2,4,6 ಮತ್ತು 7 ನೇ ಪ್ರತಿವಾದಿಗಳು ಮೃತ 3 ಹಾಗೂ 5 ನೇ ಪ್ರತಿವಾದಿಗಳು 15 ವರ್ಷಗಳಿಂದ ಪರಿಚಿತರಿದ್ದಾರೆ . ವಾದಿ ಮತ್ತು ಪ್ರತಿವಾದಿಗಳಾದ ನಾವೆಲ್ಲರೂ ಕಲ್ಲೂರು ಗ್ರಾಮದವರು ಎಂದರೆ ಸರಿ . ವಾದಿಯು ವಾದ ಪತ್ರದಲ್ಲಿ ತನಗೆ ದಾವಾ ಸ್ವಾತ್ತಿನ ಸಂಬಂಧ ಕ್ರಯದ ಕರಾರುಪತ್ರ ಬರೆದುಕೊಟ್ಟಿದ್ದಾರೆ ಎಂದು ತಿಳಿಸಿದ್ದಾರೆ . ವಾದಿಯು ಜಯಲಕ್ಷ್ಮಮ್ಮ, ನಾಗರಾಜು, ಅನಂತ ಕುಮಾರ, ರಾಜಶೇಖರ್ , ನಾರಾಯಣಪ್ಪ ಹಾಗೂ ಇತರರ ಮೇಲೆ ಈ ದಾವೆ ಸಲ್ಲಿಸಿದ್ದಾರೆ . ತನ್ನ ಪ್ರತಿರಕ್ಷಣಾ ಪತ್ರದ ವಿಚಾರಗಳು ತಿಳಿದಿವೆ . 1 ರಿಂದ 7 ನೇ ಪ್ರತಿವಾದಿಗಳು ಪ್ರತಿರಕ್ಷಣಾ ಪತ್ರ ಸಲ್ಲಿಸಿರುವುದಿಲ್ಲ , ಸಲ್ಲಿಸಲು ಸಿದ್ದತೆ ನಡೆಸಿದ್ದಾರೆ . ದಿಃ 01-08-2018 ರಂದು ನಾನು ದಾವಾ ಸ್ವತ್ತಿನ ಸಂಬಂಧ ಕ್ರಯದ ಕರಾರು ಪತ್ರವೊಂದನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿ . ಜಯಲಕ್ಷ್ಮಮ್ಮ, ನಾಗರಾಜು, ಅನಂತ ಕುಮಾರ, ರಾಜಶೇಖರ್, ಮಂಗಳಮ್ಮ, ಸುಶೀಲಮ್ಮ, ರಾಜಣ್ಣ, ಹರೀಶ್ ರವರು ಕರಾರು ಪತ್ರ ಬರೆದುಕೊಟ್ಟಿದ್ದಾರೆ . ಕರಾರು ಪತ್ರ ಬರೆಸಿಕೊಳ್ಳುವ ಮೊದಲು 1 ನೇ ಪ್ರತಿವಾದಿಯ ಹೆಸರಿನಲ್ಲಿದ್ದ ಈ- ಸ್ವತ್ತು ದಾಖಲೆ ನೀಡಿದ್ದೇನೆ .ಯಾವುದೇ ಒಬ್ಬ ವ್ಯಕ್ತಿಯು ಯಾವುದೇ ಸ್ವತ್ತನ್ನು ಖರೀದಿಸಬೇಕಿದ್ದಲ್ಲಿ ಸ್ವತ್ತಿನ ಮೂಲ ದಾಖಲೆಗಳನ್ನು ಮತ್ತು ಬರೆದುಕೊಡುವ ವ್ಯಕ್ತಿಗಳ ಕುಟುಂಬದ ವಿವರಗಳನ್ನು ಪಡೆದುಕೊಳ್ಳುತ್ತಾರೆ ಎಂದರೆ ಸರಿ . ದಾವಾ ಸ್ವತ್ತು ಮೂಲತಃ ತಿಮ್ಮಶೆಟ್ಟಪ್ಪ ರವರ ಹೆಸರಿನಲ್ಲಿತ್ತು . ತಿಮ್ಮಶೆಟ್ಟಪ್ಪ ನಂತರ ಚಂದ್ರಯ್ಯ ಕೆ ಟಿ ರವರ ಹೆಸರಿಗೆ ನಂತರ ಅವರ ಪತ್ನಿ ಜಯಮ್ಮ ರವರ ಹೆಸರಿಗೆ ಸ್ವತ್ತು ಖಾತೆಯಾಗಿದೆ . 1 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗುವ ಮೊದಲು ಕೆ ಟಿ ಚಂದ್ರಯ್ಯ ರವರ ಎರಡನೇ ಪತ್ನಿ ಮೀನಾಕ್ಷಮ್ಮ ರವರ ಹೆಸರಿನಲ್ಲಿ ಖಾತೆ ಇತ್ತು ಎಂದರೆ ಸರಿ . ದಿಃ07-04-2017

ರಂದು 1 ರಿಂದ 7 ನೇ ಪ್ರತಿವಾದಿಗಳು ದಾವಾ ಸ್ವತ್ತಿನ ಸಂಬಂಧ ವಾದಿಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ನನಗ ಗೊತ್ತಿಲ್ಲ. ದಾವಾ ಸ್ವತ್ತನ್ನು ರೂ.12,50,000/- ಗಳಿಗೆ ಖರೀದಿಸಿದ್ದೇನೆ . ನಿಡಿ -1 ರಲ್ಲಿ ರೂ.2,85,000/-ಗಳು ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಸರ್ಕಾರಿ ಮೊತ್ತವನ್ನು ನಮೂದಿಸಿದ್ದೇನೆ ಎಂದು ತಿಳಿಸಿದ್ದಾರೆ. ನಿಡಿ -1 ರ ದಿನಾಂಕದಂದು ರೂ.1,85,000/-ಗಳನ್ನು ಮುಂಗಡ ಹಣವಾಗಿ ನೀಡಿದ್ದೇನೆ . ನಿಡಿ-1 ರ ಪ್ರಕಾರ 1 ರಿಂದ 7 ನೇ ಪ್ರತಿವಾದಿಗಳಿಗೆ ಇನ್ನು ರೂ.1,00,000/- ಗಳು ನೀಡಲು ಬಾಕಿ ಇದ್ದೇನೆ . ಸರ್ಕಾರಕ್ಕೆ ಸ್ಟ್ಯಾಂಪ್ ಶುಲ್ಕ ಮತ್ತು ನೋಂದಣಿ ಶುಲ್ಕ ಪಾವತಿಸಬೇಕಾಗುತ್ತದೆ ಎಂಬ ಕಾರಣಕ್ಕೆ ನಿಡಿ -1 ರಲ್ಲಿ ಕೇವಲ ರೂ. 2,85,000/- ಗಳನ್ನು ತೋರಿಸಿದ್ದೇನೆ ಎಂದರೆ ಸರಿಯಲ್ಲ . ನಿಡಿ -1 ರ ಆಧಾರದಲ್ಲಿ 1 ರಿಂದ 7 ನೇ ಪ್ರತಿವಾದಿಗಳು ನನಗೆ ದಾವಾ ಸ್ವತ್ತಿನ ಸ್ವಾಧೀನ ನೀಡಿಲ್ಲ . ವಾದಿಯು ದಾವಾ ಸ್ವತ್ತಿನ ಸಂಬಂಧ ಕರಾರು ಪತ್ರ ಬರೆಸಿಕೊಂಡಿರುವ ವಿಚಾರ ಒಂದುವರೆ ವರ್ಷಗಳ ಹಿಂದೆ ವಕೀಲರ ಮೂಲಕ ನನಗೆ ತಿಳಿಯಿತು . ದಿಃ 18-02-2021 ರಂದು ನಾನು ಪ್ರತಿರಕ್ಷಣಾ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿ . ಫೆಬ್ರುವರಿ 2021 ನೇ ಸಾಲಿನಲ್ಲಿಯೇ ಸಹಾ ಪ್ರತಿರಕ್ಷಣಾ ಪತ್ರ ಸಲ್ಲಿಸಿದ್ದರೂ ಸಹಾ ಒಂದುವರೆ ವರ್ಷಗಳ ಹಿಂದೆ ಮಾಹಿತಿ ತಿಳಿಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ-1 ನ್ನು ಗುಬ್ಬಿ ತಾಲ್ಲೂಕು ಕಚೇರಿಯ ಬಳಿ ಬರೆಸಲಾಗಿದೆ . ನಿಡಿ -1 ಕ್ಕೆ ರಾಜಣ್ಣ , ರಾಜಶೇಖರ್, ಹರೀಶ್ ಮತ್ತು ನಾನು ಮಾಹಿತಿ ನೀಡಿದ್ದೇವೆ . ನಿಡಿ -1 ನ್ನು ತಯಾರಿಸುವಾಗ 1 ರಿಂದ 7 ನೇ ಪ್ರತಿವಾದಿಗಳು ಹಾಜರಿದ್ದರು . ನಿಡಿ -1 ರ ಹಿಂದೆ 7-8 ದಿನಗಳ ಮೊದಲು ಖರೀದಿಯ ಬಗ್ಗೆ ಮಾತುಕತೆ ನಡೆಸಿದ್ದೆವು .ಮಾತುಕತೆಯ ಸಮಯ 1 ರಿಂದ 7 ನೇ ಪ್ರತಿವಾದಿಗಳು ನಾನು ಮತ್ತು ನಮ್ಮ ಗ್ರಾಮದವರಾದ ಚಂದ್ರಯ್ಯ ಮತ್ತು ಮೋಹನ್ ರವರು ಹಾಜರಿದ್ದೆವು . ಚಂದ್ರಯ್ಯ ಮತ್ತು ಮೋಹನ್ ಮರಣ ಹೊಂದಿದ್ದಾರೆ . ಕ್ರಯದ ಒಟ್ಟು ರೂ.12,50,000/ ಗಳನ್ನು ಯಾವಾಗ ನೀಡಿದ್ದೀರಿ ಎಂದರೆ ಸಾಕ್ಷಿಯು ಮಾತುಕತೆ ಸಮಯ ಮನೆಯಲ್ಲಿಯೇ 5 ಲಕ್ಷ ಹಣ ನೀಡಿದ್ದೆ, ನಿಡಿ -1 ರ ನೋಂದಣಿ ದಿನದಂದು ರೂ.1,85,000/- ಗಳನ್ನು ನೀಡಿದ್ದೇನೆ ಎಂದು ಸಾಕ್ಷಿ ಹೇಳಿದ್ದಾರೆ . ರೂ.12,50,000/ ಗಳಿಗೆ ದಾವಾ ಸ್ವತ್ತನ್ನು ಖರೀದಿಸಲು ಮಾತುಕತೆ ನಡೆದಿತ್ತು

ಎಂದು ತೋರಿಸಲು ದಾಖಲೆ ಇದೆಯೇ ಎಂದರೆ ಸಾಕ್ಷಿಯು 1 ರಿಂದ 7 ನೇ ಪ್ರತಿವಾದಿಗಳು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುತ್ತಾರೆ ಎಂದು ಹೇಳಿದ್ದಾರೆ .

ರೂ.12,50,000/- ಗಳ ಸಂಬಂಧ ಯಾವುದೇ ದಾಖಲೆ ಇರುವುದಿಲ್ಲ . ನಿಡಿ -1 ದಿನಾಂಕದಂದು ರಾಜಣ್ಣ ಮತ್ತು ರಾಮಯ್ಯ ಎಂಬುವರು ಸಾಕ್ಷಿದಾರರಾಗಿ ಹಾಜರಿದ್ದರು ಹೆಸರುಗಳನ್ನು ಮರೆತಿದ್ದೇನೆ ಎಂದು ಸಾಕ್ಷಿ ಮುಂದುವರೆದು ಹೇಳಿದ್ದಾರೆ . ನಿಡಿ -1 ರ ದಿನಾಂಕದಂದು ಬಸವರಾಜು ಎಸ್ ಬಿನ್ ಚಿಕ್ಕಣ್ಣ ರವರು ಹಾಜರಿದ್ದರು ಎಂದರೆ ಸರಿ . ನಿಡಿ -1 ನ್ನು ವಿಶ್ವನಾಥ್ ರವರು ತಯಾರಿಸಿಕೊಟ್ಟಿದ್ದಾರೆ. ಯಾವುದೇ ದಾಖಲೆ ತಯಾರಿಸಿದ್ದಲ್ಲಿ ಪತ್ರ ಬರಹಗಾರರು ತಮ್ಮ ಸಹಿ ಮತ್ತು ಮೊಹರು ಹಾಕುತ್ತಾರೆ ಎಂದರೆ ಕ್ರಯದ ಕರಾರು ಪತ್ರಕ್ಕೆ ಹಾಕುವುದಿಲ್ಲವೆಂದು ಸಾಕ್ಷಿ ಹೇಳಿದ್ದಾರೆ . ನಿಡಿ-1 ಕ್ಕೆ ವಿವರಗಳನ್ನು ನಾಗರಾಜು ಬಿನ್ ಚಂದ್ರಯ್ಯ ರವರು ನೀಡಿದ್ದಾರೆ ಮತ್ತು ಅವರೇ ದಾಖಲೆಗೆ ಸಹಿ ಮಾಡಿದ್ದಾರೆ , ಅದರಲ್ಲಿ ಬಿಕ್ಲಂ ಸಹಿ ಇರುವುದಿಲ್ಲ ವೆಂದರೆ ಸಾಕ್ಷಿಯು ನಾಗರಾಜು ರವರು ಸ್ವತ್ತಿನ ಮಾಲೀಕರಾಗಿದ್ದಾರೆ ಅವರೊಡನೆ ಬೇರೆ ಪ್ರತಿವಾದಿಗಳು ಇದ್ದರು ಎಂದು ಉತ್ತರಿಸಿದ್ದಾರೆ . ನಿಡಿ -1 ಕ್ಕೆ ಪ್ರತಿವಾದಿಗಳ ಸಹಿಗಳನ್ನು ಮನೆಯಲ್ಲಿಯೇ ಮಾಡಿಸಿದ್ದೀರಾ ಎಂದರೆ ಸಾಕ್ಷಿಯು ತಾಲ್ಲೂಕು ಕಚೇರಿಯಲ್ಲಿ ಮಾಡಿಸಿದ್ದೇವೆ ಎಂದು ತಿಳಿಸಿದ್ದಾರೆ . ನಿಡಿ-1 ರ ದಾಖಲೆಯನ್ನು ವಿಚಾರಣೆಗೆ ಒಳಪಡಿಸಲು ಯಾವುದೇ ತೊಂದರೆ ಇಲ್ಲ .

ದಾವಾ ಸ್ವತ್ತನ್ನು ಖರೀದಿಸುವ ಮೊದಲು ಪತ್ರಿಕ ಪ್ರಕಟಣೆ ನೀಡಿಲ್ಲ . 1 ರಿಂದ 7 ನೇ ಪ್ರತಿವಾದಿಗಳ ವಂಶವೃಕ್ಷವನ್ನು ನಾನು ಪಡೆದುಕೊಂಡಿಲ್ಲ . ನಿಡಿ -1 ನ್ನು ನೋಂದಾಯಿಸುವ ಮೊದಲು ವಾದಿಯನ್ನು ಸಂಪರ್ಕಿಸಿಲ್ಲ . ದಾವಾ ಸ್ವತ್ತು ಪೂರ್ವ - ಪಶ್ಚಿಮಃ 107 ಅಡಿಗಳು, ಉತ್ತರ -ದಕ್ಷಿಣಃ 33 ಅಡಿಗಳು ಇವೆ. ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವ-ಪಶ್ಚಿಮ ಃ ರಸ್ತೆ , ಉತ್ತರ-ದಕ್ಷಿಣಕ್ಕೆ ಃ ಮನೆಗಳು . ವಾದಿಯ ಭಾಗಕ್ಕೆ 1 ರಿಂದ 7 ನೇ ಪ್ರತಿವಾದಿಗಳು ಎಷ್ಟು ವಿಸ್ತೀರ್ಣದ ಸ್ವತ್ತನ್ನು ಬಿಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ . ನಿಪಿ -4 ಮತ್ತು ನಿಡಿ -1 ರಲ್ಲಿ ತೋರಿಸಿರುವ ಸ್ವತ್ತುಗಳ ವಿಸ್ತೀರ್ಣ ಒಂದೇ ಇರುತ್ತದೆ ಎಂದರೆ ಸಾಕ್ಷಿಯು 1 ರಿಂದ 7 ನೇ ಪ್ರತಿವಾದಿಗಳು ವಾದಿಯ ಭಾಗದ ವಿಸ್ತೀರ್ಣದ ಸ್ವತ್ತನ್ನು ಬಿಟ್ಟು ಉಳಿದ ವಿಸ್ತೀರ್ಣಕ್ಕೆ ಕ್ರಯ ಪತ್ರ ನೋಂದಾಯಿಸಿಕೊಡುತ್ತೇವೆ ಎಂದು ಹೇಳಿದ್ದಾರೆ ಅದೇ

ಕಾರಣಕ್ಕೆ ಇನ್ನು ಕ್ರಯ ಪತ್ರ ನೋಂದಾಯಿಸಿಕೊಟ್ಟಿಲ್ಲ ಎಂದು ಹೇಳಿದ್ದಾರೆ .

ವಾದಿಯು ದಿಃ 07-04-2017 ರಂದು 1 ರಿಂದ 7 ನೇ ಪ್ರತಿವಾದಿಗಳಿಂದ ದಾವಾ ಸ್ವತ್ತಿಗೆ ಸಂಬಂಧಿಸಿ ನೋಂದಾಯಿತವಲ್ಲದ ಕ್ರಯದ ಕರಾರು ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ದಿನಾಂಕದಂದು ಜಯಮ್ಮ ಅಲಿಯಾಜ್ ಜಯಲಕ್ಷ್ಮಮ್ಮ, ಕೆ ಟಿ ನಾರಾಯಣಪ್ಪ , ಕೆ ಟಿ ರಾಜಣ್ಣ , ಹರೀಶ್ ಮತ್ತು ಮಂಗಳಮ್ಮ ರವರು ವಾದಿಗೆ ದಾಖಲೆ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ಇಂದಿಗೂ 1 ರಿಂದ 7 ನೇ ಪ್ರತಿವಾದಿಗಳ ಸಂಪರ್ಕದಲ್ಲಿ ಇದ್ದೇನೆ ಎಂದರೆ ಸರಿ . ದಿಃ 21-08-2018 ರಂದು ವಾದಿಯು 1 ರಿಂದ 7 ನೇ ಪ್ರತಿವಾದಿಗಳಿಗೆ ವಕೀಲರ ನೋಟಿಸ್ ನೀಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ . ಸದರಿ ನೋಟಿಸ್ ಗೆ 1 ರಿಂದ 7 ನೇ ಪ್ರತಿವಾದಿಗಳು ದಿಃ 16-09-2018 ರಂದು ನನ್ನ ವಕೀಲರ ಮೂಲಕ ಪ್ರತ್ಯುತ್ತರ ಕೊಡಿಸಿದ್ದಾರೆ ಎಂದರೆ ಇರಬಹುದು ಎಂದು ಉತ್ತರಿಸಿದ್ದಾರೆ . ನಿಡಿ -2 ರ ದಾಖಲೆ ನಿಮಗೆ ಹೇಗೆ ಲಭ್ಯವಾಯಿತು ಎಂದರೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳಿದ್ದು ನಂತರ ವಕೀಲರು ನೀಡಿದ್ದಾರೆ ಎಂದು ತಿಳಿಸಿದ್ದಾರೆ . ನಿಪಿ-13 ರ ದಾಖಲೆಯ ಬಗ್ಗೆ ನನಗೆ ಎಲ್ಲಾ ಮಾಹಿತಿ ಮೊದಲೇ ಲಭ್ಯವಿದ್ದು ಆದರೂ ಸಹಾ ಏನು ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಯ ಪಿತ್ರಾರ್ಜಿತ ಸ್ವತ್ತಾಗಿರುವ ಕಾರಣ 1 ರಿಂದ 7 ನೇ ಪ್ರತಿವಾದಿಗಳು ಸದರಿ ಸ್ವತ್ತನ್ನು ವಾದಿಗೆ ಮಾರಾಟ ಮಾಡಬೇಕೆಂದು ನಿಪಿ-13 ದಾಖಲೆಯನ್ನು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ನಿಪಿ -13 ರದಾಖಲೆಯನ್ನು ಬರೆದುಕೊಟ್ಟ ಸಮಯ ಕೆ ಟಿ ನಾರಾಯಣಪ್ಪ ಮತ್ತು ಕೆ ಟಿ ರಾಜಣ್ಣ ಜೀವಂತವಿದ್ದರು ಎಂದರೆ ನನಗೆ ಗೊತ್ತಿಲ್ಲ . ನಿಪಿ -13 ರ ದಾಖಲೆಯನ್ನು ಬರೆದುಕೊಡುವ ಸಮಯ ದಾವಾ ಸ್ವತ್ತು ಮೀನಾಕ್ಷಮ್ಮ ರವರ ಹೆಸರಿನಲ್ಲಿತ್ತು ಎಂದರೆ ಗೊತ್ತಿಲ್ಲ. 1 ರಿಂದ 7 ನೇ ಪ್ರತಿವಾದಿಗಳು ನಿಪಿ -13 ರ ಬಗ್ಗೆ ನನಗೆ ಯಾವುದೇ ಮಾಹಿತಿ ನೀಡಿಲ್ಲ . ದಾವಾ ಸ್ವತ್ತನ್ನು ನಿಪಿ -13 ಕ್ಕಿಂತಲೂ ಕಡಿಮೆ ಮೊತ್ತಕ್ಕೆ ಬರೆಸಿಕೊಂಡಿದ್ದೀರಿ ಎಂದರೆ ಸಾಕ್ಷಿಯು ಹೆಚ್ಚು ಕಡಿಮೆಯ ಬಗ್ಗೆ ನನಗೆ ಗೊತ್ತಿಲ್ಲ , ನನ್ನ ಮೊತ್ತಕ್ಕೆ ನಾನು ಬರೆಸಿಕೊಂಡಿದ್ದೇನೆ ಎಂದು ಉತ್ತರಿಸಿದ್ದಾರೆ . ಈ ದಾವೆಯ ವಿಚಾರ ತಿಳಿದ ನಂತರ 1 ರಿಂದ 7 ನೇ ಪ್ರತಿವಾದಿಗಳ ವಿರುದ್ಧ ನಾನು ಯಾವುದೇ ಕ್ರಮ ಕೈಗೊಂಡಿಲ್ಲ . 1 ರಿಂದ 7 ನೇ ಪ್ರತಿವಾದಿಗಳ ವಿರುದ್ಧ ನಾನು ಯಾವುದೇ ದಾವೆ ಸಲ್ಲಿಸಿಲ್ಲ . ನಾನು ಮತ್ತು 1 ರಿಂದ 7 ನೇ ಪ್ರತಿವಾದಿಗಳು ಶಾಮೀಲಾಗಿ ವಾದಿಗೆ ತೊಂದರೆ ನೀಡುವ ಉದ್ದೇಶದಿಂದ

ನಿಡಿ -1 ನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .